# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ : 1207
2. ಸದಸ್ಯರ ಹೆಸರು : ಶ್ರೀ ಐವನ್ ಡಿ ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 18.03.2025
4. ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು.

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಮಂಗಳೂರು-ಬೆಂಗಳೂರು ಮಧ್ಯೆ ಸಂಚರಿಸುವ ವಿಮಾನಗಳ ಸಂಖ್ಯೆ ಎಷ್ಟು; ಹೆಚ್ಚಿನ ದರ ಏರಿಕೆ ಮಾಡುವ ಇಂಡಿಗೋ ವಿಮಾನ ಅಧಿಕಾರಿಗಳ ಮೇಲೆ ಇಲಾಖೆ ಮೇಲೆ ಇರುವ ಹತೋಟಿ ಏನು; ದರ ನಿಗದಿಯಾದ ಬಗ್ಗೆ ರಾಜ್ಯ ಸರ್ಕಾರದ ನಿಯಂತ್ರಣ ಇದೆಯೇ; ಇದ್ದರೆ (ವಿವರ ನೀಡುವುದು) | ಪ್ರತಿ ದಿನ ಬೆಂಗಳೂರು ಮತ್ತು ಮಂಗಳೂರು ನಡುವೆ ಒಟ್ಟು 8 ವಿಮಾನಗಳು ಸಂಚರಿಸುತ್ತಿವೆ.<br><br>ವಿಮಾನಯಾನ ಟಿಕೇಟ್ ದರವನ್ನು ವಿಮಾನಯಾನ ಸಂಸ್ಥೆಗಳು ನಿಗಧಿಪಡಿಸುತ್ತಿವೆ. ಕೇಂದ್ರ ಸರ್ಕಾರದ DGCA ಸಂಸ್ಥೆಯು ಸಮಂಜಸ ದರಗಳನ್ನು ಖಚಿತಪಡಿಸಿಕೊಳ್ಳಲು ವಿಮಾನಯಾನ ಸಂಸ್ಥೆಗಳ ಬಳಕೆ ಮಾಡುವ ಕಾರ್ಯವಿಧಾನವನ್ನು ಮೇಲ್ವಿಚಾರಣೆ ಮಾಡುತ್ತದೆ. ವಿಮಾನಯಾನ ಟಿಕೇಟ್ ದರ ನಿಗದಿಪಡಿಸುವ ಕುರಿತು ರಾಜ್ಯ ಸರ್ಕಾರದ ನಿಯಂತ್ರಣದಲ್ಲಿರುವುದಿಲ್ಲ. |
| (ಆ) | ಮಂಗಳೂರು-ಬೆಂಗಳೂರಿಗೆ ರೂ.25,000/- ನಿಗದಿ ಪಡಿಸಿದ್ದು ಸರ್ಕಾರದ ಅಭಿಪ್ರಾಯವೇನು; | ವಿಮಾನಯಾನ ಟಿಕೇಟ್ ದರ ನಿಗಧಿಪಡಿಸುವ ವಿಷಯವು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಈ ಕುರಿತು ರಾಜ್ಯ ಸರ್ಕಾರದ ನಿಯಂತ್ರಣ ಇರುವುದಿಲ್ಲ. ಆದ್ದರಿಂದ ಅನ್ವಯಿಸುವುದಿಲ್ಲ. |
| (ಇ) | ಮಂಗಳೂರು ವಿಮಾನನಿಲ್ದಾಣ ಅಂತರಾಷ್ಟ್ರೀಯ ವಿಮಾನನಿಲ್ದಾಣ ಆಗಿ 20 ವರ್ಷ ಕಳೆದರೂ, ಇನ್ನೂ ಅಂತರಾಷ್ಟ್ರೀಯ ಮಟ್ಟದಲ್ಲಿ ಕೇವಲ 2-3 ದೇಶಗಳಿಗೆ ಬಿಟ್ಟರೆ ಇತರೆ ದೇಶಕ್ಕೆ ಓಡಾಡದೇ ಇರುವ ಬಗ್ಗೆ ಇಲಾಖೆ ಕೈಗೊಂಡ ಕ್ರಮವೇನು; ಇದರಿಂದ ಪ್ರವಾಸೋಧ್ಯಮಕ್ಕೆ ಹಿನ್ನಡೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಪ್ರಸ್ತುತ ಯಾವ ಯಾವ ದೇಶಗಳಿಗೆ ಸಂಚರಿಸಲಾಗುತ್ತಿದೆ? (ವಿವರ ನೀಡುವುದು) | ಮಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರವು (Airports Authority of India) ನಡೆಸಲಾಗುತ್ತಿದೆ. ಪ್ರಸ್ತುತ ಮಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಅಂತರಾಷ್ಟ್ರೀಯ ಮಟ್ಟದಲ್ಲಿ 8 ಸ್ಥಳಗಳಿಗೆ (ದುಬೈ, ಅಬುದಬಿ, ದಮ್ಮಾಮ್, ಮಸ್ಕತ್, ದೋಹಾ, ಜೆಡ್ಡಾ, ಬಹ್ರೇನ್, ಕುವೈತ್) ವಿಮಾನಗಳು ಸಂಚರಿಸುತ್ತಿವೆ. ಒಟ್ಟು ಒಂದು ವಾರಕ್ಕೆ 88 ವಿಮಾನಗಳು (ಆಗಮನ + ನಿರ್ಗಮನ) ಅಂತರಾಷ್ಟ್ರೀಯ ಸ್ಥಳಗಳಿಗೆ ವಿಮಾನಯಾನ ಕಾರ್ಯಾಚರಣೆಗೊಳ್ಳುತ್ತವೆ. |

ಸಂಖ್ಯೆ:ಮೂಅಇ 51 ರಾಅವಿ 2025

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ, ಸಚಿವರು